**<u>ದಿವಾಣಿ ನ್ಯಾಯಾಧೀಶರು ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ</u>**

<u>ನ್ಯಾಯಾಲಯ, ಶಿಗ್ಗಾಂವ</u>

**<u>ಸಿಸಿ ಸಂಖ್ಯೆ 382/2023</u>**

**ಪಿರ್ಯಾದಿಃ** ಬಸವಣ್ಣೆಪ್ಪ ತಂದೆ ಬಸಪ್ಪ ಯಲಿಗಾರ,
ವಯಾಃ 52 ವರ್ಷ, ಉದೋಗಃ ಶೇತ್ಕಿ ಮತ್ತು ವ್ಯಾಪಾರ,
ಸಾಃ ಬಂಕಾಪುರ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ.

**<u>ವಿರುಧ್ಧ</u>**

**ಆರೋಪಿಃ** ಶ್ರೀ ಚಿದಾನಂದ ತಂದೆ ವೀರಭದ್ರಪ್ಪ ಕಮ್ಮಾರ,
ವಯಾಃ 50 ವರ್ಷ, ಉದೋಗಃ ಬಡಗಿತನ,
(ತೇರು ಮತ್ತು ರಥ ನಿರ್ಮಾಣದ ಕೆಲಸ)
ಸಾಃ ತರ್ಲಕಘಟ್ಟ, ಶಿಗ್ಗಾಂವ ಕುಂದಗೋಳ,
ಧಾರವಾಡಜಿಲ್ಲೆ.

<u>ಆಪಾದನೆ</u>

ಫಿರ್ಯಾದುದಾರ ಮತ್ತು ಆರೋಪಿಯಾದ ನೀವು ಪರಿಚಯಸ್ಥರಾಗಿದ್ದು, ನಿಮ್ಮ ಮನೆತನದ ಅಡಚಣೆ ಹಾಗೂ ಸಣ್ಣ ಪುಟ್ಟ ಕೈಗಡ ಸಾಲವನ್ನು ತೀರಿಸುವ ಸಲುವಾಗಿ ದಿನಾಂಕಃ 16.02.2022 ರಂದು ಫಿರ್ಯಾದಿಯವರಿಂದ ರೂ.3,00,000/- ಗಳಗನ್ನು ಕೈಗಡ ಸಾಲವಾಗಿ ಪಡೆದಿದ್ದು, ಸದರಿ ಹಣವನ್ನು ಮೂರು ತಿಂಗಳೊಳಗಾಗಿ ಮರುಪಾವತಿಸುವುದಾಗಿ ಹೇಳಿದ್ದು, ಸದರಿ ಹಣದ ಮರುಪಾವತಿಗಾಗಿ ದಿನಾಂಕಃ 18.02.2023 ರಂದು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ತರ್ಲಘಟ್ಟ ಶಾಖೆ, ಕುಂದಗೋಳ ತಾಲ್ಲೂಕು ಚೆಕ್ ಸಂಖ್ಯೆ 002844 ಅನ್ನು ರೂ.3,00,000/- ಗಳಿಗೆ ಫಿರ್ಯಾದಿದಾರರಿಗೆ ನೀಡಿದ್ದು, ಸದರಿ ಚೆಕ್‌ನ್ನು ಕೆನರಾ ಬ್ಯಾಂಕ್, ಬಂಕಾಪೂರ ಶಾಖೆಯಲ್ಲಿ ದಿನಾಂಕಃ 03.03.2023 ರಂದು ಹಾಜರುಪಡಿಸಿದಾಗ ದಿನಾಂಕಃ 03.03.2023 ರಂದು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂಬ ಹಿಂಬರಹದೊಂದಿಗೆ ಅಮಾನ್ಯವಾಗಿರುತ್ತದೆ ನಂತರ ದಿನಾಂಕಃ 17.03.2023 ರಂದು ಕಾನೂನು ತಿಳುವಳಿಕೆ ಪತ್ರ ನಿಮಗೆ ನೀಡಿದ್ದು ದಿನಾಂಕಃ 21.03.2023 ರಂದು ನೀವು ಸ್ವೀಕರಿಸಿದ್ದು, ನಂತರ ನೀವು ಯಾವುದೇ ಪ್ರತ್ಯುತ್ತರ

ನೀಡಿರುವುದಿಲ್ಲ ಹಾಗೂ ನೀವು ಹಣವನ್ನು ಮರುಪಾವತಿ ಮಾಡದೆ ವರ್ಗಾವಣಾ ಅಧಿನಿಯಮ 1881 ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಪ್ರಶ್ನೆ 1. ನಿಮ್ಮ ಮೇಲೆ ಮಾಡಿರುವ ಆರೋಪಗಳನ್ನು ಕೇಳಿ ಅರ್ಥ ಮಾಡಿಕೊಂಡಿರುವಿರಾ?

ಉತ್ತರಃ ಆರೋಪಿ

ಪ್ರಶ್ನೆ 2. ನೀವು ಮೇಲ್ಕಂಡ ಆರೋಪಣೆಯನ್ನು ಒಪ್ಪಿಕೊಳ್ಳಲು ಇಚ್ಚಿಸುತ್ತೀರಾ ಅಥವಾ ನಿಮ್ಮ ಪರ ಸಾಕ್ಷ್ಯ ಇದೆಯಾ?

ಉತ್ತರಃ ಆರೋಪಿ

(ಮೇಲ್ಕಂಡ ಆಪಾದನೆಯನ್ನು ಆರೋಪಿತಳಿಗೆ ಅಥರ್ವಾಗುವ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದು , ಆತನು ನೀಡಿದ ಉತ್ತರವನ್ನು ಮುಕ್ತ ನ್ಯಾಯಾಲಯದಲ್ಲಿ ದಿಃ 10.06.2024 ರಂದು ಯಥಾವತ್ತಾಗಿ ದಾಖಲಿಸಿರುತ್ತೇನೇ.)

ಸ್ಥಳಃ ಶಿಗ್ಗಾಂವ
ದಿನಾಂಕಃ 23.08.2024.

**ದಿವಾಣಿ ನ್ಯಾಯಾಧೀಶರು**
**ವ ಜೆಎಂಎಫ್‌ಸಿ., ಶಿಗ್ಗಾಂವ.**